INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -3, May--June, 2025
PageNo,13-22
Peer -Reviewed, Refereed Journal

# ಶಾಸನಗಳ ಹಿನ್ನೆಲೆಯಲ್ಲಿ ತಿ.ನರಸೀಪುರ ತಾಲ್ಲೂಕಿನ ಮೈಸೂರು ಒಡೆಯರ ರಾಜಕೀಯ ಚರಿತ್ರೆ

*ಕೆ.ಎಸ್.ಅರುಣ್ ಕುಮಾರ್.[1]
**ಪ್ರೊ.ಎಂ.ಜಿ. ಮಂಜುನಾಥ.[2]

ನಾಡಿನ ಇತಿಹಾಸದಲ್ಲಿ ಮೈಸೂರು ಜಿಲ್ಲೆಗೆ ವಿಶಿಷ್ಟ ಸ್ಥಾನವಿದ್ದು, ಜಿಲ್ಲೆಯ ಇತಿಹಾಸದಲ್ಲಿ ನರಸೀಪುರ ತಾಲ್ಲೂಕಿನ ಪಾತ್ರ ಹಿರಿದಾಗಿದೆ. ಈ ತಾಲ್ಲೂಕು ಆದಿಮಾನವನ ಚರಿತ್ರೆಯಿಂದ ಮೊದಲೆಗೊಂಡು ಆಧುನಿಕ ಕಾಲದ ಅಂದರೆ, ಇಂದಿನವರೆಗೆ ವಿವಿಧ ಹಂತಗಳಲ್ಲಿ ವಿಕಾಸ ಹೊಂದಿದ ಚಾರಿತ್ರಿಕ ಬೀಡು. ಇಂತಹ ಚಾರಿತ್ರಿಕ ಗೂಡಿನಲ್ಲಿ ನರಸೀಪುರ, ಹೆಮ್ಮಿಗೆ, ಮುತ್ತಲವಾಡಿ ಹಾಗೂ ತಲಕಾಡುಗಳಲ್ಲಿ ಪತ್ತೆಯಾಗಿರುವ ಇತಿಹಾಸ ಪೂರ್ವಕಾಲಕ್ಕೆ ಸಂಬಂಧಿಸಿದ ಮಾನವ ವಸತಿನೆಲೆಗಳು ಮಹತ್ವದ್ದಾಗಿದ್ದು, ಉತ್ಖನನಗಳೂ ನಡೆದು ಮಹತ್ವದ ಅಂಶಗಳು ಬೆಳಕು ಕಂಡಿವೆ. ರಾಜ್ಯದಲ್ಲೇ ಅತ್ಯಂತ ಹೆಚ್ಚು ಶಾಸನಗಳನ್ನು ಹೊಂದಿರುವ ಕೆಲವೇ ತಾಲೂಕುಗಳಲ್ಲಿ ನರಸೀಪುರವು ಒಂದಾಗಿದೆ. ಈ ಶಾಸನಗಳು ಒಂದು ಕಾಲಕ್ಕೆ ತನ್ನ ವಿಶಿಷ್ಟತೆಯಿಂದಾಗಿ ಜೀವಂತವಾಗಿದ್ದ ಮತ್ತು ಆಯಾ ಕಾಲದ ವಿಷಯಗಳನ್ನು ದಾಖಲಿಸುತ್ತಿದ್ದ ಶಾಸನಗಳು ಹಲವು ಶತಮಾನಗಳ ಕಾಲ ಅವಜ್ಞೆಗೆ ಒಳಗಾಗಿದ್ದವು. ಒಂದು ರೀತಿಯಲ್ಲಿ ಸತ್ತಂತೆಯೇ ಇದ್ದ, ಆದರೆ ಎಂದೂ ಸಾಯದ ಶಾಸನಗಳಿಗೆ ಮತ್ತೆ ಉಸಿರಾಟ ದೊರೆತದ್ದು 19ನೇ ಶತಮಾನದ ಕೊನೆಯ ಎರಡು ದಶಕಗಳಲ್ಲಿ, ಅಂದಿನಿಂದ ಇಂದಿನವರೆಗೆ ಶಾಸನಗಳು ಸಂಶೋಧಕರ ಬಾಯಾರಿಕೆ ತಣಿಸುವ, ಇತಿಹಾಸದ ಮರೆತ ಪುಟಗಳನ್ನು ನೆನಪಿಸುವ ಹಾಗೂ ನಿಧಿ ಶೋಧಕರಿಗೆ ಒಡೆಯದ ಒಗಟಾಗಿರುವ ವಿಸ್ಮಯಗಳಾಗಿವೆ.[1] ಇಂತಹ ಶಾಸನಗಳು ತಿ. ನರಸೀಪುರ ತಾಲ್ಲೂಕಿನಾದ್ಯಂತ 323 ಪ್ರಕಟಿತ ಶಾಸನಗಳು ದೊರೆತಿವೆ. ಇವುಗಳಲ್ಲಿ ಮೈಸೂರು ಒಡೆಯರ ಕಾಲಘಟ್ಟದಲ್ಲಿ ರಚನೆಯಾದ ಶಾಸನಗಳನ್ನು ಈ ಮುಂದಿನಂತೆ ವಿಶ್ಲೇಷಿಸಲಾಗಿದೆ.

ಡಾ.ಎ.ವಿ.ನರಸಿಂಹಮೂರ್ತಿಯವರು ಮೈಸೂರು ಒಡೆಯರನ್ನು ಕುರಿತು, ದಕ್ಷಿಣ ಭಾರತದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಮೈಸೂರು ಒಡೆಯರುಗಳ ಸ್ಥಾನ ಬಲು ದೊಡ್ಡದು.

---

1.ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ,ಸ್ನಾತಕೋತ್ತರ ಕೇಂದ್ರ, ಹಾಸನ,ಮೈಸೂರು ವಿಶ್ವವಿದ್ಯಾನಿಲಯ.
2.ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಹಾಸನ, ಮೈಸೂರು ವಿಶ್ವವಿದ್ಯಾನಿಲಯ.

ಬಹುಶಃ ವಿಜಯನಗರದ ಅನಂತರದ ಇತಿಹಾಸದಲ್ಲಿ ಪ್ರಖ್ಯಾತರಾದ ಹಿಂದೂ ದೊರೆಗಳು ಎಲ್ಲೂ ಕಾಣುವುದಿಲ್ಲ. ಇಡೀ ದಕ್ಷಿಣ ಭಾರತದ ಸಂಸ್ಕೃತಿಯೇ ಮೈಸೂರಿನಲ್ಲಿ ಇವರ ಕಾಲದಲ್ಲಿ ಕೇಂದ್ರೀಕೃತವಾಗಿದ್ದಿತು.

ಮೈಸೂರು ಅರಸರು ತಮ್ಮನ್ನು ಯದುವಂಶೀಕರು, ದ್ವಾರಾವತೀಪುರವರಾಧೀಶ್ವರರೆಂದು ತಮ್ಮನ್ನು ಶಾಸನಗಳಲ್ಲಿ ಕರೆದುಕೊಂಡಿದ್ದಾರೆ. ತಿ.ನರಸೀಪುರ ಗ್ರಾಮದಲ್ಲಿ ದೊರೆಯುವ ಶಾಸನವೊಂದರಲ್ಲಿ ಇಲ್ಲಿ

**ಅಸ್ತಿ ಕ್ಷೀರಮಯಾದ್ದೇವೈರ್ಮಥ್ಯಮಾನಾನ್ಮಹಾಂಬುಧೇಃ ।**

**ನವನೀತಮಿವೋದ್ಭೂತಮಪನೀತತ ಮೋಮಹಃ ॥**

**ತಸ್ಯಾನೀತ್ತನಯಸ್ತಪೋಭಿರತುಲೈರನ್ವರ್ಥನಾಮಾ ಬುಧಃ ।**

**ಪುಣ್ಯೈರಸ್ಯ ಪುರೂರವಾ ಭುಜಬಲೈರಾಯುರ್ದ್ವಿಷಾಂ ನಿಘ್ನತಃ ।**

**ತಸ್ಯಾಸೀನ್ನಹುಷೋಸ್ಯ ತಸ್ಯ ವರುಷೋ ಯುದ್ಧೇ ಯಯಾತಿಃ**

**ಕ್ಷಿತೌ ಖ್ಯಾತಸ್ತಸ್ಯ ಯದುರ್ಯದೀಯಯಶನಾ ವ್ಯಾಪ್ತಂ ನಭೋಮಂಡಲಂ ।**

**ದ್ವಾರಕಾನಗರೀಪ್ರಾಂತೇ ಸಂತತಿಸ್ತಸ್ಯ ಸಂತತಾ ।**

**ಸರ್ವಕಾಮಸಮೃದ್ಧಾಭೂತ್ಕ್ಷೋಣೀರಕ್ಷಣ ದೀಕ್ಷಿತಾ ।**

**ತತ್ರೋತ್ಪನ್ನಾಃ ಕತಿಚನ ಯಾದವಸ್ತೇಯದೃಚ್ಛಯಾ ।**

**ಕರ್ನಾಟದೇಶಮಾಜಗುಃ ಕಾವೇರ್ಯಾಲಂಕೃತಂ ನೃಪಾಃ ।**

**ರಮಣೀಯಂ ಸಮಾಲೋಕ್ಯ ದೇಶಂ ಸರ್ವಗುಣಾನ್ವಿತಂ ।**

**ಅತ್ರೈವ ವಸತಿಂ ಚಕ್ರುರ್ಮಹೀಶೂರ ಪುರೋತ್ತಮೇ ।**

**ತದ್ವಂಶೇ ಚಾಮಭೂಪಾಲಃ ಸಂಜಜ್ಞೇರಿಸಿಷೋದನಃ ।**

**ಯಶಸ್ವಿ ನರಪಾಲೇಷು ಕ್ಷೀರಬ್ಧಾವಿನ ಚಂದ್ರಮಾಃ ।**[2]

ಬಹುಶಃ ಕರ್ನಾಟಕದ ಶಾಸನಗಳಲ್ಲಿಯೇ ಬಹಳ ದೀರ್ಘವಾದ 16 ತಾಮ್ರಫಲಕಗಳಲ್ಲಿ 1390 ಸಾಲಿನ ಕನ್ನಡ ಮತ್ತು ಸಂಸ್ಕೃತದಲ್ಲಿ ರಚನೆಯಾದ ಶಾಸನವು ಮೈಸೂರು ಒಡೆಯರ ಮೂಲವನ್ನು ಹಾಗೂ ವಂಶಾವಳಿಯನ್ನು ಉಲ್ಲೇಖಿಸುತ್ತದೆ. ಈ ಶಾಸನವು ತಿಳಿಸಿದಂತೆ "ದೇವತೆಗಳು ಕ್ಷೀರಸಾಗರವನ್ನು ಮಥಿಸುವಾಗ ಉದ್ಭವಿಸಿದ ಬೆಣ್ಣೆಯಂತೆ, ಕತ್ತಲೆಯನ್ನೋಡಿಸುವ ಚಂದ್ರ ಜನಿಸಿದನು. ಚಂದ್ರನ ಅಪ್ರತಿಮ ತಪಸ್ಸಿನಿಂದ ಬುಧನು ಜನಿಸಿದನು. ಅವನ ಮಗ ಪುರೂರವನು ಪುಣ್ಯಕಾರ್ಯಗಳಿಗೆ ಜನಿಸಿದನು. ಅವನಿಗೆ ಭುಜಬಲದಿಂದ ಶತ್ರುಗಳನ್ನು ನಾಶಪಡಿಸುವ ಆಯುವು ಹುಟ್ಟಿದನು. ಆತನಿಗೆ ನಹುಷನು ಜನಿಸಿದನು. ಅವನ ಮಗ ಯಯಾತಿಯು ಯುದ್ಧದಲ್ಲಿ ಹಿಂಸಾತ್ಮಕನಾಗಿದ್ದನು ಮತ್ತು ಭೂಮಿಯ ಮೇಲೆ ಪ್ರಸಿದ್ಧನಾಗಿದ್ದವನು. ಅವನಿಗೆ ಯದು ಜನಿಸಿದನು. ಅವನ ಖ್ಯಾತಿಯು ಆಕಾಶದ ತುಂಬೆಲ್ಲಾ ಹರಡಿತು.

ಈ ವಂಶೀಕರು ನಿರಂತರವಾಗಿ ಎಲ್ಲರ ಅಪೇಕ್ಷೆಗಳನ್ನು ಪೂರೈಸುತ್ತಾ ಮತ್ತು ಭೂಮಿಯ ರಕ್ಷಣೆಗೆ ಬದ್ಧರಾಗಿ, ದ್ವಾರಕಾನಗರದ ಪ್ರದೇಶದಲ್ಲಿ ಪ್ರವರ್ಧಮಾನಕ್ಕೆ ಬಂದವರು. ಅದೇ ಸಾಲಿನಲ್ಲಿ ಜನಿಸಿದ ಕೆಲವು ಯಾದವರು ಆಕಸ್ಮಿಕವಾಗಿ ಕಾವೇರಿ ನದಿಯಿಂದ ಅಲಂಕೃತವಾದ ಕರ್ನಾಟ ದೇಶಕ್ಕೆ ಬಂದರು. ಈ ದೇಶದ ಸೌಂದರ್ಯ ಮತ್ತು ಶ್ರೇಷ್ಠತೆಗಳನ್ನು ನೋಡಿದ ಅವರು ಮಹಿಶೂರಪುರ ಎಂಬ ಅತ್ಯುತ್ತಮ ನಗರದಲ್ಲಿ ತಮ್ಮ ನಿವಾಸವನ್ನು ಪಡೆದರು. ಈ ಸಾಲಿನಲ್ಲಿ ಯದುವಂಶದಲ್ಲಿ ಕೃಷ್ಣನಂತೆ ಶತ್ರು ಸಂಹಾರಕನಾಗಿ ಚಾಮ–ಭೂಪಾಲನಾಗಿ ಜನಿಸಿದನು ಎಂದು ಅರ್ಥವಿದೆ.

ಮೈಸೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ. 1399 ರಿಂದ 1947 ರವರೆಗೆ ಮೈಸೂರು ಒಡೆಯರು ಆಡಳಿತ ನಡೆಸಿದರು. ಈ ವಂಶದ ಮೂಲ ಪುರುಷ ಚಾಮಭೂಪಾಲರು. ಇವರು ವಿಜಯನಗರ ಸಾಮ್ರಾಜ್ಯದ ಪತನದ ನಂತರ ದಕ್ಷಿಣ ಭಾರತದಲ್ಲಿ ಉಳಿದ ಏಕೈಕ ಪ್ರಬಲ ಅರಸು ಮನೆತನ. ಮೊದಲಿಗೆ ಮೈಸೂರು ಒಡೆಯರು ಚಿಕ್ಕಹಳ್ಳಿಗಳ ಪುಟ್ಟ ಪಾಳೆಯಪಟ್ಟವನ್ನಾಗಿಸಿಕೊಂಡು, ಕ್ರಿ.ಶ. 1399 ರಂದು ಯದುರಾಯನೆಂಬ ಮೂಲಪುರುಷನಿಂದ ಆರಂಭವಾದ ಈ ಸಂಸ್ಥಾನವು ಆರಂಭವಾಯಿತೆಂದು ಪರಿಗಣಿಸಲಾಗಿದೆ.[3] ಆದರೆ ಮೈಸೂರು ಸಂಸ್ಥಾನದ ನಿಜವಾದ ಸಂಸ್ಥಾಪಕ ರಾಜ ಒಡೆಯರೆಂದು, ಅವರ ಆಳ್ವಿಕೆಯು ಕ್ರಿ.ಶ. 1578 ರಿಂದ 1617 ಎಂದು ಇತಿಹಾಸಕಾರರು ಗುರುತಿಸಿದ್ದಾರೆ. ಇವರು ನಲ್ವತ್ತು ವರ್ಷಗಳ ದೀರ್ಘಕಾಲ ಇವರು ಆಳ್ವಿಕೆ ನಡೆಸಿದರು. ಅದುವರೆಗೂ ಮೈಸೂರು ವಂಶ 33 ಹಳ್ಳಿಗಳಿಂದ ಮತ್ತು 300 ಜನ ಸೈನಿಕರಿಂದ ಮಾತ್ರ ಕೂಡಿತ್ತು. ರಾಜ ಒಡೆಯರ ಕಾಲದಲ್ಲಿ ಅದರ ವ್ಯಾಪ್ತಿ ಹೆಚ್ಚಿತು. ಅಕ್ಕಿಹೆಬ್ಬಾಳು, ಸೋಸಲೆ, ಯಳಂದೂರು ಮೊದಲಾದ ಸುತ್ತಮುತ್ತಲ ಪಾಳೆಯಗಾರರನ್ನು ಗೆದ್ದು ರಾಜ್ಯವನ್ನು ವಿಸ್ತರಿಸಿದರು. ರಾಜ್ಯದ ವ್ಯವಸ್ಥೆಗಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡರು.[4]

ಆರಂಭಿಕ ರಾಜಧಾನಿ ಮೈಸೂರು ಕ್ರಿ.ಶ. 1612ರಲ್ಲಿ ಶ್ರೀರಂಗಪಟ್ಟಣ ವಶವಾದ ನಂತರ ಶ್ರೀರಂಗಪಟ್ಟಣ ಮೈಸೂರು ಒಡೆಯರ ರಾಜಧಾನಿಯಾಯಿತು. ಈ ಅಂಶವನ್ನು ಕ್ರಿ.ಶ. 1622ರ ತಿ. ನರಸೀಪುರದ ಶಾಸನವು ಈ ಮುಂದಿನಂತೆ ಉಲ್ಲೇಖಿಸುತ್ತದೆ.

"ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ವೆಂಕಟಪತಿದೇವ ಮಹಾರಾಯರು ಘನಗಿರಿನಗರದಲ್ಲಿ ಸಾಮ್ರಾಜ್ಯಸಿಂಹಾಸನದಲ್ಲಿ ಪೃಥ್ವೀರಾಜ್ಯಂ ಗಯಿವುತ್ತಿರಲಾಗಿ ನಮ್ಮ ಅರಸನವರು ರಾಜೊಡೆಯರೆಯ್ಯನವರಿಗೆ ಉಮ್ಮತ್ತೂರು ಶ್ರೀರಂಗಪಟ್ಟಣವನ್ನು ಅಭಯಹಸ್ತ ನಿರೂಪಪೂರ್ವಕವಾಗಿ ಕಾಣಂಚಿಯಾಗಿ ಪಾಲಿವಲ್ಲಿ" ಎಂದಿದ್ದು, ರಾಜವೊಡೆಯರಿಗೆ ವಿಜಯನಗರದ ರಾಜಪರಮೇಶ್ವರರಾದ ವೆಂಕಟಪತಿರಾಯರು ಕಾಣಂಚಿಯಾಗಿ ಉಮ್ಮತ್ತೂರು ಮತ್ತು ಶ್ರೀರಂಗಪಟ್ಟಣವನ್ನು ನೀಡಿದರೆಂದು ಉಲ್ಲೇಖಿಸುತ್ತದೆ.[5] ಅಂದರೆ ಶ್ರೀರಂಗಪಟ್ಟಣವು ಬಳುವಳಿಯಾಗಿ ರಾಜವೊಡೆಯರ ಕೈ ಸೇರಿತು. ಇದಕ್ಕೆ

ಪೂರಕವಾಗಿ ವಿಲ್ಕ್ಯಾರವರು 'ವಿಜಯನಗರದ ಅರವೀಡು ವಂಶದ ವೆಂಕಟಪತಿರಾಯರ ಅನುಮತಿಯಲ್ಲಿ ಶ್ರೀರಂಗಪಟ್ಟಣದ ಪ್ರತಿನಿಧಿಯಾಗಿ ಆಡಳಿತ ನೋಡಿಕೊಳ್ಳುತ್ತಿದ್ದ ಶ್ರೀರಂಗರಾಯ ಅಥವಾ ತಿರುಮಲರಾಯನು ಕ್ರಿ.ಶ. 1610 ರಿಂದ ತಲಕಾಡಿಗೆ ಹೋಗಿದ್ದಾಗ, ಅನಾರೋಗ್ಯದಿಂದ ಅಲ್ಲಿಯೇ ಮರಣಿಸಿದ ಸಂದರ್ಭದಲ್ಲಿ ಶ್ರೀರಂಗಪಟ್ಟಣವು ಶಾಂತಿಯುತವಾಗಿಯೇ ಮೈಸೂರು ಅರಸರ ವಶವಾಯಿತು ಎಂದಿದ್ದಾರೆ.[6]

ರಾಜಒಡೆಯರಿಗಿಂತಲೂ ಪೂರ್ವದ ಹಲವು ವ್ಯಕ್ತಿಗಳು ಮೈಸೂರು ಒಡೆಯರಾಗಿ ಆಳ್ವಿಕೆ ನಡೆಸಿದರೆಂದು ಶಾಸನಗಳು ಉಲ್ಲೇಖಿಸುತ್ತವೆ. ಅಂತಹ ಅರಸರಲ್ಲಿ ವಿಜಯ (ಕ್ರಿ.ಶ. 1399–1423), ಒಂದನೆಯ ಚಾಮರಾಜ (1423–59), ಒಂದನೆಯ ತಿಮ್ಮರಾಜ (ಕ್ರಿ.ಶ. 1459–78), ಎರಡನೇ ಚಾಮರಾಜ (1479–1513), ಮುಮ್ಮಡಿ ಬೆಟ್ಟದ ಚಾಮರಾಜ ಒಡೆಯರು (1513–53), ಇಮ್ಮಡಿ ತಿಮ್ಮರಾಜ (1553–73) ಹಾಗೂ ನಾಲ್ವಡಿ ಬೋಳ ಚಾಮರಾಜ (1572–76)[7] ಇವರ ಶಾಸನಗಳು ತಿ.ನರಸೀಪುರದ ಶಾಸನಗಳಲ್ಲಿ ಲಭ್ಯವಿಲ್ಲ. ಆದರೆ ಇತರ ಶಾಸನಗಳ ಆಧಾರದಿಂದ ಮೈಸೂರು ಅರಸರ ವಂಶಾವಳಿಯಲ್ಲಿ ಈ ಹೆಸರುಗಳು ಉಲ್ಲೇಖಗೊಂಡಿವೆ. ಈ ಪ್ರದೇಶದಲ್ಲಿ ಒಡೆಯರ ಕಾಲದ ಶಾಸನಗಳು ದೊರೆಯದಿರಲು ಕಾರಣವೇನೆಂದರೆ ಅವರ ಆಡಳಿತವು ತೆರಕಣಾಂಬಿಯ ಆಸುಪಾಸಿನ ಪ್ರದೇಶಕ್ಕೆ ಸೀಮಿತವಾಗಿದ್ದಂತೆ ತೋರುತ್ತದೆ ಎಂದು ಸಿ. ಹಯವದನರಾವ್ ಅವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.[8] ಈ ಅವಧಿಯಲ್ಲಿ ಕಳಲೆ, ಮೂಗೂರು, ಉಮ್ಮತ್ತೂರು, ತಗಡೂರು ಹಾಗೂ ಹುರಗಳಲ್ಲೂ ಸ್ಥಳೀಯ ಪಾಳೇಗಾರರು ಆಳುತ್ತಿದ್ದರು.

ಮೈಸೂರು ಅರಸ ನಾಲ್ಕನೇ ಬೋಳಚಾಮರಾಜನು (1572–76), ಕಾರುಗಹಳ್ಳಿ, ತಲಕಾಡು, ಕನ್ನಂಬಾಡಿ ಮುಂತಾದ ಪಾಳೇಗಾರರನ್ನು ಸೋಲಿಸಿದ್ದನಲ್ಲದೇ ವೆಂಕಟಾದ್ರಿಯ ಸೇನೆಯನ್ನು ಎದುರಿಸಿದನೆಂದು ಹೇಳಲಾಗುತ್ತದೆ. ಇವರ ನಂತರ ಬೆಟ್ಟದ ದೇವರಾಜ (1576–78), ಒಂದನೆಯ ರಾಜ ಒಡೆಯರು (1578–1617) ಅಧಿಕಾರಕ್ಕೆ ಬಂದು ಮೈಸೂರು ಒಡೆಯರ ಮನೆತನಕ್ಕೆ ಭದ್ರ ಬುನಾದಿ ಹಾಕಿದರು. ಇವರು ರಂಗಸಮುದ್ರ ಹಾಗೂ ಸುತ್ತಮುತ್ತಲಿನ 12 ಹಳ್ಳಿಗಳನ್ನು 1586ರಲ್ಲಿ, ಮುಳ್ಳೂರನ್ನು 1591 ರಲ್ಲಿ ಕಾರುಗಹಳ್ಳಿ ಕೋಟೆ 1595ರಲ್ಲಿ ವಶಪಡಿಸಿಕೊಳ್ಳುವ ಮೂಲಕ ಶ್ರೀರಂಗಪಟ್ಟಣದ ಪ್ರಾಂತಾಧಿಕಾರಿಯಾಗಿದ್ದ ತಿರುಮಲನ ವಿರೋಧಿಯಾದನು. ಮಿಗಿಲಾಗಿ ರಾಜ ಒಡೆಯನು ಸೋಸಲೆ (1606), ಬನ್ನೂರು (1607) ಮುಂತಾದವುಗಳನ್ನು ಗೆದ್ದು 1610 ರ ವೇಳೆಗೆ ಪ್ರಬಲಗೊಂಡು ಶ್ರೀರಂಗಪಟ್ಟಣದ ಗದ್ದುಗೆಗಾಗಿ ತಿರುಮಲನೊಂದಿಗೆ ಕದನಕ್ಕಿಳಿದು ಅವನನ್ನು ಹೊರದಬ್ಬುವ ಮೂಲಕ ವಿಜಯನಗರದ ಅರಸ ಇಮ್ಮಡಿ ವೆಂಕಟಾದ್ರಿಯ ವಿಶ್ವಾಸಕ್ಕೂ ಪಾತ್ರನಾದನು. ಈ ಅಂಶವನ್ನು ನರಸೀಪುರದ ಕ್ರಿ.ಶ.1612ರ ಶಾಸನದಲ್ಲಿ ರಾಜಒಡೆಯರಿಗೆ ಉಮ್ಮತ್ತೂರು–ಶ್ರೀರಂಗಪಟ್ಟಣಗಳು

ವೆಂಕಟಪತಿರಾಯರಿಂದ ಕಾಣಂಚಿಯಾಗಿ ನೀಡಿದ ವಿಷಯವು ಪುಷ್ಟೀಕರಿಸುತ್ತದೆ. ತಿರುಮಲನ ಪತ್ನಿ ಅಲಮೇಲಮ್ಮನು ಮಾಲಂಗಿಗೆ ಹೋಗುವಾಗ, ರಂಗನಾಯಕಿ ಅಮ್ಮನವರ ಅಲಂಕಾರಕ್ಕೆ ಬೇಕಾಗುತ್ತಿದ್ದ ಒಡವೆಗಳನ್ನು ತೆಗೆದುಕೊಂಡು ಹೋಗಿದ್ದಳೆಂದೂ, ಅವನ್ನು ತೆಗೆದುಕೊಂಡು ಬರುವಂತೆ ರಾಜ ಒಡೆಯರು ಹೇಳಿ ಕಳುಹಿಸಲು, ಆಕೆ ಆ ಒಡವೆಗಳನ್ನು ಕಟ್ಟಿಕೊಂಡು ರಾಜ ಒಡೆಯರ ವಂಶಕ್ಕೆ ಶಾಪವನ್ನು ಕೊಟ್ಟು ಮಾಲಂಗಿಯ ಮಡುವಿನಲ್ಲಿ ಬಿದ್ದು ಸತ್ತಳೆಂದೂ ಕಥೆ ಇದೆ.[9] ಈ ಶಾಪದಿಂದ ಮೈಸೂರು ಅರಸರಲ್ಲಿ ದತ್ತಕ ಅರಸರಿಗೆ ಮಾತ್ರವೇ ಮಕ್ಕಳಾಗುತ್ತದೆಂಬ ಅಂಶವೂ ಇಂದಿಗೂ ಉಳಿದಿದೆ. ಅದೇನೆ ಇದ್ದರು, ಶ್ರೀರಂಗಪಟ್ಟಣದಿಂದಾಳಲಾರಂಭಿಸಿದ ರಾಜ ಒಡೆಯರು ತೆರಕಣಾಂಬಿ, ಉಮ್ಮತ್ತೂರುಗಳನ್ನು ವಶಪಡಿಸಿಕೊಂಡನು. ತಲಕಾಡು, ಮೂಗೂರು, ಕಳಲೆ, ಹುಲ್ಲಹಳ್ಳಿ ಮುಂತಾದ ಪಾಳೇಗಾರರಿಂದ ಕಪ್ಪಕಾಣಿಕೆ ಪಡೆದನು. ಅಲ್ಲದೇ ವಿಜಯನಗರದಲ್ಲಿ ನಡೆಯುತ್ತಿದ್ದ ದಸರದ ಮಾದರಿಯಲ್ಲಿ ಶ್ರೀರಂಗಪಟ್ಟಣದಲ್ಲಿ ದಸರ ಉತ್ಸವವನ್ನು ಆರಂಭಿಸಿದನು.[9]

ರಾಜ ಒಡೆಯರ ಹಿರಿಯ ಮಗ ನರಸರಾಜ ಒಡೆಯರು ತಂದೆಗಿಂತ ಮೊದಲೇ ಕಾಲವಾದುದ್ದರಿಂದ, ಅವರ ಮೊಮ್ಮಗ ಐದನೇ ಚಾಮರಾಜ ಒಡೆಯರು ಪಟ್ಟಾಭಿಷಿಕ್ತರಾದರು. ಇವರು ಕ್ರಿ.ಶ. 1618–1637 ರವರೆಗೆ ಆಡಳಿತ ನಡೆಸಿದರು. ಕ್ರಿ.ಶ. 1617ರಲ್ಲಿ ಇವರು ತಲಕಾಡು, ಕೆರೆಗೋಡು, ಮಳವಳ್ಳಿ, ಚನ್ನಪಟ್ಟಣ, ಬೆಳ್ಳೂರು, ನಾಗಮಂಗಲ, ಚನ್ನರಾಯಪಟ್ಟಣ ಮೊದಲಾದ ಊರುಗಳನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳಲು ಸಮರ್ಥರಾದರು. ಕೆರೆಕಾಲುವೆಗಳನ್ನು ಕಟ್ಟಿಸಿ ಪ್ರಜೆಗಳಿಗೆ ಅನುಕೂಲ ಮಾಡಿಕೊಟ್ಟರು. ವಿದ್ಯಾಭ್ಯಾಸಕ್ಕೆ ಧಾರಾಳವಾಗಿ ಪ್ರೋತ್ಸಾಹ ಲಭಿಸಿತು. ಧಾರ್ಮಿಕ ಕಾರ್ಯಗಳಿಗೆ ಉದಾರವಾಗಿ ದಾನವನ್ನು ನೀಡಿದರು.[10] ಕ್ರಿ.ಶ. 1621 ರ ತೊಟ್ಟವಾಡಿ ಗ್ರಾಮದ ಶಾಸನವು ಇವರ ಆಳ್ವಿಕೆಯ ಶಾಸನವಾಗಿದೆ.[11] ಈ ಶಾಸನವು ತೊಟ್ಟವಾಡಿ ಗ್ರಾಮವನ್ನು ಮಾದಪಟ್ಟಣದ ವಿರಕ್ತ ಮಠಕ್ಕೆ ನೀಡಿದರೆಂಬುದನ್ನು ಉಲ್ಲೇಖಿಸುತ್ತದೆ. ಕ್ರಿ.ಶ. 1622 ರ ತಿರುಮಕೂಡಲು ನರಸೀಪುರದ ಶಾಸನವು ಚಾಮರಾಜ ಒಡೆಯರ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಕ್ರಿ.ಶ. 1622 ರ ತಿರುಮಕೂಡಲು ನರಸೀಪುರದ ಶಾಸನವು ಚಾಮರಾಜ ಒಡೆಯರ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ.[12] ಈ ಶಾಸನವು ಅಗ್ರಹಾರವನ್ನು ನಿರ್ಮಿಸಲು ಉಮ್ಮತ್ತೂರು ಚಾವಡಿಗೆ ಸೇರಿದ ಮೂಗೂರ ಸ್ಥಳದ ತಾಯೂರನಾಡಿನ ಆಲಗೂಡು ಮತ್ತು ನವಿಲೂರು ಎರಡು ಗ್ರಾಮಗಳನ್ನು ಸೇರಿಸಿ 'ಚಾಮರಾಜ ಸಮುದ್ರ' ಎಂಬ ಅಗ್ರಹಾರವನ್ನು ನಿರ್ಮಿಸಿ ಈ ಅಗ್ರಹಾರವನ್ನು 41 ವೃತ್ತಿಗಳನ್ನಾಗಿ ವಿಭಜಿಸಿ ಒಂದು ವೃತ್ತಿಯನ್ನು ಕಾವೇರಿ–ಕಪಿಲಾ ಸಂಗಮದ ತ್ರಿಮಕೂಟ ಕ್ಷೇತ್ರದ ಗುಂಜಾನರಸಿಂಹಸ್ವಾಮಿಗೆ ಒಂದು ವೃತ್ತಿಯನ್ನು ಇನ್ನುಳಿದ 40 ವೃತ್ತಿಯನ್ನು 33 ಜನ ಬ್ರಾಹ್ಮಣರಿಗೆ ದತ್ತಿಯಾಗಿ ನೀಡಿದನೆಂದು ಉಲ್ಲೇಖಿಸುತ್ತದೆ. ಇವರ ಆಳ್ವಿಕೆಯ ಕ್ರಿ.ಶ. 1633 ರ ತಲಕಾಡಿನ

ಶಾಸನವು[13] ಒಡೆಯರ ವ್ಯವಹಾರಗಳ ಪ್ರತಿನಿಧಿಯಾದ ಕೆಂಪ–ವೊಡೆಯರ ಮಗ ಬಸವಲಿಂಗಣ್ಣನ ಧಾರ್ಮಿಕ ಕಾರ್ಯವನ್ನು ಉಲ್ಲೇಖಿಸುತ್ತದೆ.

ಇವರ ನಂತರ ರಾಜ ಒಡೆಯರ ಕಿರಿಯ ಮಗ ಇಮ್ಮಡಿ ರಾಜ ಒಡೆಯರು ಮೈಸೂರು ಸಿಂಹಾಸನದ ಅಧಿಪತಿಯಾದರು. ಇವರು ಕೇವಲ ಒಂದು ವರ್ಷ ಆಡಳಿತ ನಡೆಸಿ ಮರಣಿಸಿದರು. ಇವರ ನಂತರ ರಾಜ ಒಡೆಯರ ಸಹೋದರ ಬೆಟ್ಟದ ಚಾಮರಾಜ ಒಡೆಯರ ಮಗ ಕಂಠೀರವ ನರಸರಾಜ ಒಡೆಯರು ಕ್ರಿ.ಶ. 1638–1659 ರವರೆಗೆ ರಾಜ ಒಡೆಯರ ಸ್ವೀಕೃತ ದತ್ತುಪುತ್ರರಾಗಿ ಪಟ್ಟಾಭಿಷಿಕ್ತರಾದರು. ಇವರ ನಂತರ ಅವರ ಚಿಕ್ಕಪ್ಪ ಮುಪ್ಪಿನ ದೇವರಾಜನ ಮಗನಾದ ದೇವರಾಜ ಒಡೆಯರು (1659–1673), ಕಂಠೀರವ ನರಸರಾಜ ಒಡೆಯರ ಸ್ವೀಕೃತ ಪುತ್ರರಾಗಿ ಮೈಸೂರಿನ ಸಿಂಹಾಸನಾಧೀಶ್ವರಾದರು[14] ಇವರಿಗೆ ಮೂರುಮನ್ನೆಯ ಗಂಡ ಮತ್ತು ಹಿಂದೂರಾಯ ಸುರತ್ರಾಣ ಎಂಬ ಬಿರುದುಗಳಿದ್ದುವು. ಕ್ರಿ.ಶ. 1663 ರ ತಲಕಾಡಿನ ಶಾಸನವು ದೊಡ್ಡ ದೇವರಾಜ ಒಡೆಯರ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ.[15] ಪ್ರಸ್ತುತ ಶಾಸನವು 'ಶ್ರೀಮದ್ರಾಜಾಧಿರಾಜ ಶ್ರೀಭೂಪಾಲ ಪರಮೇಶ್ವರ ಕಲ್ಯಾಣ ಚರಿತೋ ವೀರಪ್ರತಾಪ ಬಿರುದಾಂಕಿತ ಆರ್ಥಿಚಾತಕ ಸಂದೋಹ ಸಂತೋಷ ಜಲತೋಯದ ಪ್ರತ್ಯರ್ಥಿ ಪೃಥಿವೀಪಾಲ ಮೌಳಿಲಾಲಿತ ತುರುಷ್ಕಶುಷ್ಕಗಹನದಹನೋದ್ಯದ್ದವಾನಳ ಚಂಡಬಾಹುಬಲೋದ್ದಂಡ ಪಾಂಡ್ಯಖಂಡನ ಪಂಡಿತ, ಚೋಳಕೇರಳ ನೇಪಾಳ ಭೂಪಾಲ ಕರಿಕೇಸರಿ ಕೊಂಗವಂಗ ಕಲಿಂಗಾಧಿ ಭೂವೃತ್ತಿಮಿರಭಾಸ್ಕರ ಬಿರುದಂತ್ಯಂಬರ ಗಂಡ ಸ್ತರಣೀ ಜನವಲಯಕುಸುಮಕೋದಂಡ ರಾಜಲಾಬ್ಧಿ ಶಶಾಂಕಶ್ಯೊರೋಧರಣೀ ವರಾಹ ಬಿರುದಾಂಕ ಶ್ರೀ ನಾರಾಯಣ ಪಾದ ಪಂಕಜಯುಗೀವಿನ್ಯಸ್ತ ವಿಷ್ವಗ್ಬರ ಶ್ರೀಮತ್ಪಶ್ಚಿಮರಂಗನಾಥನಗರೀ ಸಿಂಹಾಸನಾಧೀಶ್ವರ ಪ್ರತ್ಯರ್ಥಕ್ಷಿತಿಪಾಳರತ್ನ ಮಕುಟೀ ನೀ ರಾಜಿತಾಂಘ್ರಿ ಸ್ವಯಂ ದೇವಬ್ರಾಹ್ಮಣರ ಕ್ಷಣಾಯ ಪೃಥಿವೀಸಾಮ್ರಾಜ್ಯದೀಕ್ಷಾಂ ವಹನ್ ಆತ್ರೇಯ ಗೋತ್ರದ ಚಾಮರಾಜರ ಪೌತ್ರ ದೇವರಾಜರ ಮಗ ದೇವರಾಜ' ಎಂದು ವರ್ಣಿಸಿದೆ. ಅಲ್ಲದೇ ಶಾಸನದಲ್ಲಿ 'ಮಂಡೇವು' ಗ್ರಾಮವನ್ನು ಸೀಮೆಯ ಹಲ್ಲೆಗೆರೆ ಅಗ್ರಹಾರವೆಂದು ಉಲ್ಲೇಖಿಸಲಾಗಿದೆ. ಈ ಮಂಡೇವು ಗ್ರಾಮವು ಮಂಡ್ಯ ಎಂಬ ಪದದ ಪದ ನಿಷ್ಪತ್ತಿಯಾಗಿರಬಹುದೆಂದು ಡಾ. ನಂಜುಂಡಸ್ವಾಮಿಯವರು ಹೇಳುತ್ತಾರೆ.[16]

ಕ್ರಿ.ಶ. 1673 ರ ಬೆಟ್ಟಹಳ್ಳಿ (ಮುಡುಕುತೊರೆ) ಶಾಸನವು ಚಾಮರಾಜಯ್ಯನವರ ಪೌತ್ರರಾದ ದೇವರಾಜ ಒಡೆಯರ ಪುತ್ರರಾದ ಶ್ರೀದೇವರಾಜ ಭೂಪಾಲನವರು ವಿಕ್ರಮಾರ್ಜಿತವಾಗಿ ಬಂದ ತಲಕಾಡಸ್ಥಳಕ್ಕೆ ಸೇರುವ ಬೆಟ್ಟಹಳ್ಳಿಯ ಗ್ರಾಮಕ್ಕೆ ಪ್ರತಿನಾಮದೇಯವಾದ ದೇವರಾಜಪುರ ಗ್ರಾಮ ಎಂದು ಉಲ್ಲೇಖಿಸುತ್ತದೆ. ಅಲ್ಲದೇ ಈ ಗ್ರಾಮವನ್ನು ಶ್ರೀ ಮಲ್ಲಿಕಾರ್ಜುನ ಸ್ವಾಮಿಗೆ ದತ್ತಿ ನೀಡಿದ ವಿವರವಿದೆ.[17]

ದೊಡ್ಡ ದೇವರಾಜ ಒಡೆಯರು ಮರಣಿಸುವ ಒಂದು ವರ್ಷ ಪೂರ್ವದಲ್ಲಿ ಕ್ರಿ.ಶ. 1672 ರಂದು ಅವರ ಹಿರಿಯ ಮಗ ಚಿಕ್ಕದೇವರಾಜ ಒಡೆಯರಿಗೆ ರಾಜ್ಯಾಭಿಷೇಕ ನೆರವೇರಿಸಿದ್ದರು. ಇವರು ಮೈಸೂರು ಒಡೆಯರ ಸಿಂಹಾಸನಾಧಿಷ್ಟರಾಗಿ, ಕ್ರಿ.ಶ. 1704 ರವರೆಗೆ ಆಳ್ವಿಕೆ ನಡೆಸಿದರು. ಕ್ರಿ.ಶ. 1676ರಲ್ಲಿನ ಶಾಸನವು ಚಿಕ್ಕದೇವರಾಜ ಒಡೆಯರ ಕಿರಿಯ ಸಹೋದರ ಕಂಠೀರವ ಅರಸರು ಎಕ್ಕಲ್ಗೆರೆ ಗ್ರಾಮವನ್ನು ಧಾರ್ಮಿಕ ಕಾರ್ಯಕ್ಕೆ ದತ್ತಿ ನೀಡಿದರೆಂದು ಉಲ್ಲೇಖಿಸುತ್ತದೆ.[18] ಅಂದರೆ ಚಿಕ್ಕದೇವರಾಜ ಒಡೆಯರು ಆಳ್ವಿಕೆ ನಡೆಸುತ್ತಿದ್ದಾಗ, ಕಂಠೀರವ ಅರಸರು ಆಡಳಿತದಲ್ಲಿ ಸಹಭಾಗಿಗಳಾಗಿದ್ದರೆಂದು ತಿಳಿಯುತ್ತದೆ. ಕ್ರಿ.ಶ.1679ರ ತಲಕಾಡಿನ ಸಂಸ್ಕೃತಿ ಶಾಸನವು ಚಿಕ್ಕದೇವರಾಜ ಒಡೆಯರ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ.[19] ಈ ಶಾಸನವು ಅರಸು ಮನೆತನದ ವ್ಯವಹಾರಗಳ ಪ್ರತಿನಿಧಿಯಾದ ಕೊಟ್ಟುರೈಯ್ಯನು ಮಾಡಿದ ಧಾರ್ಮಿಕ ಕಾರ್ಯವನ್ನು ಉಲ್ಲೇಖಿಸುತ್ತದೆ.

ಚಿಕ್ಕದೇವರಾಜ ಒಡೆಯರ ಮರಣಾನಂತರ ಅವರ ಸಹೋದರ ಇಮ್ಮಡಿ ಕಂಠೀರವ ನರಸರಾಜರು ಕ್ರಿ.ಶ. 1704–1713 ರವರೆಗೆ ಆಳ್ವಿಕೆ ನಡೆಸಿದರು. ಆದರೆ ತಿ. ನರಸೀಪುರ ತಾಲ್ಲೂಕಿನಲ್ಲಿ ಇವರ ನೇರ ಆಡಳಿತದ ಕಾಲಾವಧಿಯ ಶಾಸನಗಳು ದೊರೆತಿಲ್ಲ. ಇವರು ಮೂಕರಾಗಿದ್ದರಿಂದ ದಳವಾಯಿಗಳು ಮತ್ತು ಮಂತ್ರಿಗಳು ಆಡಳಿತವನ್ನು ನಿರ್ವಹಿಸುತ್ತಿದ್ದರು. ಇವರ ನಂತರ ದೊಡ್ಡ ದೇವರಾಜ ಒಡೆಯರು ಕ್ರಿ.ಶ. 1714–1732 ರವರೆಗೆ ಮೈಸೂರು ಸಿಂಹಾಸನವನ್ನು ಅಲಂಕರಿಸಿದರು. ಇವರ ಆಳ್ವಿಕೆಯನ್ನು ಕ್ರಿ.ಶ. 1725 ರ ತಿ. ನರಸೀಪುರ ಗ್ರಾಮದ ಶಾಸನವು ಉಲ್ಲೇಖಿಸುತ್ತದೆ.[20] ಇದೇ ಗ್ರಾಮದ ಮತ್ತೊಂದು ಶಾಸನವು ಬೆಟ್ಟದ ಚಾಮರಾಜ ಒಡೆಯರಿಂದ ಆರಂಭಿಸಿ ಕೃಷ್ಣರಾಜ ಒಡೆಯರವರೆಗೂ ವಂಶಾವಳಿಯನ್ನು ದಾಖಲಿಸುತ್ತದೆ.[21] ಈ ಶಾಸನವು ಒಡೆಯರ ಕಾಲದಲ್ಲಿ ರಚನೆಯಾದ ಅನೇಕ ಅಗ್ರಹಾರಗಳಲ್ಲಿ ಕ್ರಿ.ಶ. 18ನೇ ಶತಮಾನದ ಶಾಸನವೊಂದು ನೀಡಿದ ಅಗ್ರಹಾರ ಕೊಡುಗೆಯ ದಾನವನ್ನು ಪಾಲಿಸಿದವರಿಗೆ ಕಪಿಲಾತೀರ್ಥದ ದಂಡೆಯ ಮೇಲಿರುವ ನಂಜನಗೂಡಿನ ಶ್ರೀಕಂಠೇಶ್ವರನ ಲಿಂಗಪೂಜೆಯನ್ನು ಮಾಡಿದ ವಿಪ್ರರ ಪುಣ್ಯವನ್ನು ಪಡೆಯುತ್ತಾರೆಂದು ಉಲ್ಲೇಖಿಸಿದೆ.

ದೊಡ್ಡ ದೇವರಾಜ ಒಡೆಯರ ನಂತರ ದತ್ತು ಪುತ್ರರಾದ ಏಳನೇ ಚಾಮರಾಜ ಒಡೆಯರು ಕ್ರಿ.ಶ. 1731–1734 ರವರೆಗೆ, ಕಿರಿಯ ಸಹೋದರ (ಮತ್ತೊಬ್ಬ ದತ್ತು ಪುತ್ರ) ಇಮ್ಮಡಿ ಕೃಷ್ಣರಾಜ ಒಡೆಯರು ಕ್ರಿ.ಶ. 1734–1766 ರವರೆಗೆ ಆಳ್ವಿಕೆ ನಡೆಸಿದರು. ಕ್ರಿ.ಶ. 1749 ರ ತಿ. ನರಸೀಪುರ ಶಾಸನವು ಇಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯನ್ನು ಮತ್ತು ವಂಶಾವಳಿಯನ್ನು ಉಲ್ಲೇಖಿಸುತ್ತದೆ.[22] ಪ್ರಸ್ತುತ ಶಾಸನವು ತಿ. ನರಸೀಪುರ ತಾಲ್ಲೂಕಿನಲ್ಲಿಯೇ ಅತಿ ದೊಡ್ಡದಾದ ಶಾಸನ ಹಾಗೂ ತಾಮ್ರ ಶಾಸನವಾಗಿದ್ದು, ರಾಜ ಒಡೆಯರ ಮೂಲ ಪುರುಷ ಚಾಮನಿಂದ ಆರಂಭಗೊಂಡು ಅವನ ಮಕ್ಕಳಾದ ತಿಮ್ಮರಾಜ, ಕೃಷ್ಣ, ಬೆಟ್ಟದ ಚಾಮರಾಜರನ್ನು ಉಲ್ಲೇಖಿಸುತ್ತದೆ. ನಂತರ ಕ್ರಮವಾಗಿ ರಾಜನೃಪ, ನರಸ, ಚಾಮ, ಇಮ್ಮಡಿರಾಜ,

ಕಂಠೀರವ ನರಸರಾಜ, ದೇವರಾಜ, ಕಂಠೀರವ ನರಸ ಎಂದು ಮೈಸೂರು ಅರಸರ ರಾಜಾಡಳಿತವನ್ನು ಉಲ್ಲೇಖಿಸಿವೆ. ಮುಂದುವರೆದು ಕಂಠೀರವ ನರಸರ ಮಗ ಕೃಷ್ಣರಾಜರು ಹಾಗೂ ಅವರ ಹೆಂಡತಿ ಚಿಕ್ಕರಾಜನ ಮಗಳು ದೇವಾಜಮ್ಮನ ಮಗ ಕೃಷ್ಣರಾಜ ಅಂದರೆ ಇಮ್ಮಡಿ ಕೃಷ್ಣರಾಜ ಎಂದು ವಂಶಾವಳಿಯನ್ನು ದಾಖಲಿಸುತ್ತದೆ.

ಇಮ್ಮಡಿ ಕೃಷ್ಣರಾಜ ಒಡೆಯರ ನಂತರ ನಂಜರಾಜ ಒಡೆಯರು ಕ್ರಿ.ಶ. 1766–1770 ರವರೆಗೆ, ಇವರ ಸಹೋದರರಾದ ಬೆಟ್ಟದ ಚಾಮರಾಜ ಒಡೆಯರು ಕ್ರಿ.ಶ. 1770–1776 ರವರೆಗೆ, ಇಮ್ಮಡಿ ಕೃಷ್ಣರಾಜ ಒಡೆಯರ ದತ್ತು ಪುತ್ರರಾದ ಖಾಸಾ ಚಾಮರಾಜ ಒಡೆಯರು ಕ್ರಿ.ಶ. 1776–1796 ರವರೆಗೆ ಆಡಳಿತ (ಆಳ್ವಿಕೆ) ನಡೆಸಿದ್ದು, ಇವರ ಶಾಸನಗಳು ತಿ. ನರಸೀಪುರ ತಾಲ್ಲೂಕಿನಲ್ಲಿ ಲಭ್ಯವಿಲ್ಲ. ಈ ಮಧ್ಯೆ ರಾಜಾಡಳಿತದಲ್ಲಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಸರ್ವಾಧಿಕಾರದ ಆಗಮನವಾಯಿತು. ಇವರು ಮೈಸೂರು ಒಡೆಯರನ್ನು ಹಿನ್ನೆಲೆಗೆ ಸರಿಸಿ ತಮ್ಮ ಆಳ್ವಿಕೆಯನ್ನು ಕ್ರಿ.ಶ. 1799 ರವರೆಗೂ ಮುಂದುವರೆಸಿದರು.

ಕ್ರಿ.ಶ. 1799 ರ ಟಿಪ್ಪುವಿನ ಮರಣ ಮತ್ತು ಖಾಸಾ ಚಾಮರಾಜ ಒಡೆಯರ ನಂತರ ಮುಮ್ಮಡಿ ಕೃಷ್ಣರಾಜ ಒಡೆಯರು ಕ್ರಿ.ಶ. 1799–1868 ರವರೆಗೆ ಆಳ್ವಿಕೆ ನಡೆಸಿದರು. ಆರಂಭದಲ್ಲಿ 5 ವರ್ಷದ ಬಾಲಕರಾಗಿದ್ದ ಇವರಿಗೆ ದಿವಾನರಾಗಿ ಪೂರ್ಣಯ್ಯರವರು ಸಹಕರಿಸಿದರು. ಕ್ರಿ.ಶ. 1809ರ ಸೋಸಲೆಯ ಶಾಸನವು ಮುಮ್ಮಡಿ ಕೃಷ್ಣರಾಜ ಒಡೆಯರು ರಾಜರಾಗಿ ದಿವಾನ್ ಪೂರ್ಣಯ್ಯರವರ ಆಡಳಿತವನ್ನು ಉಲ್ಲೇಖಿಸುತ್ತದೆ.[23] ಪ್ರಸ್ತುತ ಶಾಸನವು ಸೋಸಲೆಯ ಮಠದ ಗೋಪಾಲಕೃಷ್ಣರ ಆರಾಧನೆಗೆಂದು ವಿದ್ಯಾವಲ್ಲಭತೀರ್ಥರಿಗೆ ಚಿನ್ನದ ಮಂಟಪವನ್ನು ಹರಕೆ ರೂಪದಲ್ಲಿ ಸಲ್ಲಿಸಿದ್ದರೆಂದು ಉಲ್ಲೇಖಿಸುತ್ತದೆ. ಅಲ್ಲದೆ ದಿವಾನ್ ಪೂರ್ಣಯ್ಯರನ್ನು 'ಪೂರ್ಣಪ್ರಭು' ಎಂದು ಸಂಬೋಧಿಸಿದೆ.

ಕ್ರಿ.ಶ. 1855ರ ತಿ. ನರಸೀಪುರದ ಶಾಸನವು ಮುಮ್ಮಡಿ ಕೃಷ್ಣರಾಜ ಒಡೆಯರ ಸೇವಕ ಜಗ್ಗುಲಾಲ್ ಎಂಬುವವರು ಮಾಡಿದ ಧಾರ್ಮಿಕ ದತ್ತಿಯನ್ನು ಉಲ್ಲೇಖಿಸುತ್ತದೆ.[24] ವಿಜಯಪುರದ ಶಾಸನವು ಕ್ರಿ.ಶ. 1855ರಲ್ಲಿಯೇ ರಚನೆಗೊಂಡಿದ್ದು, 'ಶ್ರೀ ಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಪ್ರತಿಮ ವೀರನರಪತಿ ಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲಪಯಃಪ್ಪಾರವಾರ ಕಳಾನಿಧಿ ಶಂಖಚಕ್ರಾದ್ಯನೇಕ ಬಿರುದಾಂಕಿತರಾದ ಶ್ರೀಕೃಷ್ಣರಾಜ ಒಡೆಯರು' ಎಂದು ಉಲ್ಲೇಖಿಸಿದೆ.[25] ಕ್ರಿ.ಶ. 19 ನೇ ಶತಮಾನದ ಸೋಸಲೆಯ ಶಾಸನವು ಮುಮ್ಮಡಿ ಕೃಷ್ಣದೇವರಾಜ ಒಡೆಯರು ವ್ಯಾಸರಾಯನ ಮಠಕ್ಕೆ ದತ್ತಿ ನೀಡಿದ್ದನ್ನು ಉಲ್ಲೇಖಿಸುತ್ತದೆ.[26] ಮುಮ್ಮಡಿ ಕೃಷ್ಣರಾಜ ಒಡೆಯರ ಮಗಳು ದೇವಾಜಮ್ಮಣ್ಣಿ ಮೂಗೂರು ತಿಬ್ಬಾದೇವಿ ದೇವಾಲಯಕ್ಕೆ ದತ್ತಿ ನೀಡಿದ್ದನ್ನು ಮೂಗೂರು ಶಾಸನವು ಉಲ್ಲೇಖಿಸುತ್ತದೆ.[27]

ಮುಮ್ಮಡಿ ಕೃಷ್ಣರಾಜ ಒಡೆಯರ ನೇರ ಆಳ್ವಿಕೆಯಲ್ಲಿನ ಕ್ರಿ.ಶ. 1811ರಲ್ಲಿ ಬ್ರಿಟಿಷ್ ಕಮೀಷನ್ನರ ನೇರ ಆಳ್ವಿಕೆಗೆ ಸೇರಿತು. ನಂತರ ಮೈಸೂರು ಒಡೆಯರ ಆಡಳಿತ ಕ್ರಿ.ಶ. 1881 ರಲ್ಲಿ ರಾಜ ಒಡೆಯರಿಗೆ ಒಪ್ಪಿಸಲಾಯಿತು. ಆ ವೇಳೆಗೆ ಹತ್ತನೆಯ ಚಾಮರಾಜ ಒಡೆಯರಿದ್ದು, ಕ್ರಿ.ಶ. 1881–94 ರವರೆಗೆ ಆಳ್ವಿಕೆ ನಡೆಸಿದರು. ದಿವಾನರಾಗಿ ರಂಗಾಚಾರ್ಲುರವರು ನೇಮಕಗೊಂಡರು. ಕಾಲಾನಂತರ ಆಧುನಿಕತೆಯ ಆರಂಭದೊಂದಿಗೆ ಸ್ವತಂತ್ರ ಭಾರತದಲ್ಲಿ ಪ್ರಜಾಪ್ರಭುತ್ವದೆಡೆಗೆ ಸಾಗಿದ ರಾಜ ಒಡೆಯರ ಸಂಸ್ಥಾನವನ್ನು ಕ್ರಿ.ಶ. 1894–1940 ರವರೆಗೆ ನಾಲ್ವಡಿ ಕೃಷ್ಣರಾಜ ಒಡೆಯರು ನಿರ್ವಹಿಸಿದರು. ಇವರ ನಂತರ ಬಂದ ಜಯ ಚಾಮರಾಜೇಂದ್ರ ಒಡೆಯರು ರಾಜಾಡಳಿತವನ್ನು ಕೊನೆಗೊಳಿಸಿದರು.

ಹೀಗೆ ಮೈಸೂರು ಒಡೆಯರು ತಮ್ಮ ರಾಜಪ್ರಭುತ್ವದಲ್ಲಿ ತಮ್ಮದೇ ಮೈಲಿಗಲ್ಲನ್ನಿರಿಸಿದವರು. ಮೈಸೂರಿನ ಅರಮನೆಯ ಅನೇಕ ಪರಂಪರೆಗೂ ರಾಜ ಒಡೆಯರೇ ಪ್ರವರ್ತಕರೆಂದು ಹೇಳಬಹುದು. ಇಂದು ದೇಶ ವಿದೇಶಗಳಲ್ಲಿ ಹೆಸರಾದ ದಸರ ಆಚರಣೆ ಪರಂಪರೆ ನವರಾತ್ರಿ ಉತ್ಸವದ ವಿಜೃಂಭಣೆಯ ಆಚರಣೆ, ಧಾರ್ಮಿಕ ಕಾರ್ಯಗಳಿಗೆ ವಿಶೇಷವಾಗಿ ಗಮನ ನೀಡಿದ್ದರು. ಇವುಗಳಿಂದ ಮೈಸೂರು ಸಂಸ್ಥಾನ ಇತಿಹಾಸದ ಪುಟಗಳಲ್ಲಿ ಅಚ್ಚಳಿಯದೆ ಉಳಿದು ಬಂದಿದೆ. ಈ ಶಾಸನಗಳಿಂದ ಮೈಸೂರು ಒಡೆಯರ ರಾಜಕೀಯ ಚರಿತ್ರೆಯ ಜೊತೆ ಜೊತೆಗೆ ಸಾಂಸ್ಕೃತಿಕ ಚಿತ್ರಣವೂ ತೆರೆದುಕೊಂಡಿದೆ.

**ಕೊನೆಟಿಪ್ಪಣಿಗಳು**

1. ಡಾ. ಎಂ.ಜಿ. ಮಂಜುನಾಥ : ಪ್ರೊ. ಜಿ.ಕೆ. ದೇವರಾಜಸ್ವಾಮಿ ; ಕನ್ನಡ ಲಿಪಿ ವಿಕಾಸ, ಮುನ್ನುಡಿ ಪುಟ vii, ಅಕ್ಟೋಬರ್ 2019, 3 ನೇ ಮುದ್ರಣ.
2. EC 5 ತಿನ 16 ತಿನ ಪಂ – 351 ಕ್ರಿ.ಶ. 1749
3. ಡಾ. ಹೆಚ್. ತಿಪ್ಪೇರುದ್ರಸ್ವಾಮಿ : 'ಕರ್ಣಾಟಕ ಸಂಸ್ಕೃತಿ ಸಮೀಕ್ಷೆ' ; ಪುಟ 162.
4. ಡಾ. ಎಚ್. ತಿಪ್ಪೇರುದ್ರಸ್ವಾಮಿ : ಕರ್ಣಾಟಕ ಸಂಸ್ಕೃತಿ ಸಮೀಕ್ಷೆ ; ಪುಟ 163
5. ಡಾ. ಬಾ.ರಾ. ಗೋಪಾಲ : EC 5 ತಿನ 15 ತಿನ ; ಪುಟ 340, ಕ್ರಿ.ಶ. 1612.
6. ಡಾ. ಎಂ.ಪಿ. ಮಂಜುಶ್ರೀ : ಮೈಸೂರು ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ ; ಪುಟ 136. ಅಥವಾ ಡಾ. ಹೆಚ್. ತಿಪ್ಪೇರುದ್ರಸ್ವಾಮಿ : ಕರ್ಣಾಟಕ ಸಂಸ್ಕೃತಿ ಸಮೀಕ್ಷೆ ; ಪುಟ 163.
7. ಡಾ. ಎಂ.ಜಿ. ಮಂಜುನಾಥ, ಪ್ರೊ. ಜಿ.ಕೆ. ದೇವರಾಜಸ್ವಾಮಿ ; ಕನ್ನಡ ಲಿಪಿ ವಿಕಾಸ ; ಪುಟ 237.

8. ಎಸ್. ರಾಜೇಂದ್ರಪ್ಪ (ಸಂ.) : ತಿ. ನರಸೀಪುರ ತಾಲ್ಲೂಕು ಗ್ಯಾಸೇಟಿಯರ್ ; ಪುಟ 34.

9. ಡಾ. ಹೆಚ್. ತಿಪ್ಪೇರುದ್ರಸ್ವಾಮಿ : ಕರ್ಣಾಟಕ ಸಂಸ್ಕೃತಿ ಸಮೀಕ್ಷೆ ; ಪುಟ 163.

10. ಡಾ. ಹೆಚ್. ತಿಪ್ಪೇರುದ್ರಸ್ವಾಮಿ : ಕರ್ಣಾಟಕ ಸಂಸ್ಕೃತಿ ಸಮೀಕ್ಷೆ ; ಪುಟ 164.

11. ಡಾ. ಬಾ.ರಾ. ಗೋಪಾಲ್ (ಸಂ.) : EC 5 ತಿನ 259, ತೊಟ್ಟವಾಡಿ ; ಪುಟ 641, ಕ್ರಿ.ಶ. 1621.

12. ಡಾ. ಬಾ.ರಾ. ಗೋಪಾಲ (ಸಂ.) : EC 5 ತಿನ 15 ತಿನ, ಪುಟ 339, ಕ್ರಿ.ಶ. 1622.

13. ಡಾ. ಬಾ.ರಾ. ಗೋಪಾಲ (ಸಂ.) : EC 5 ತಿನ 187, ತಲಕಾಡು ; ಪುಟ 580, ಕ್ರಿ.ಶ. 1633.

14. ಎ.ಎನ್.ನಿರಂಜನರಾಜ ಅರಸು : ಮುಮ್ಮಡಿ ಕೃಷ್ಣರಾಜ ಮಹೀಪಾಲ ವಂಶರತ್ನಾಕರ ; ಪುಟ 47.

15. ಡಾ. ಬಾ.ರಾ. ಗೋಪಾಲ (ಸಂ.) : EC 5 ತಿನ 218 ; ತಲಕಾಡು ; ಪುಟ 595.

16. ಡಾ. ಎಸ್. ನಂಜುಂಡಸ್ವಾಮಿ : ಮಂಡ್ಯ ಜಿಲ್ಲೆಯ ಶಾಸನ ಮತ್ತು ಸಂಸ್ಕೃತಿ ; ಪುಟ 04.

17. ಡಾ. ಬಾ.ರಾ. ಗೋಪಾಲ (ಸಂ.) : EC 5 ತಿನ 139, ಬೆಟ್ಟದಹಳ್ಳಿ ; ಪುಟ 548, ಕ್ರಿ.ಶ. 1673.

18. ಡಾ. ಬಾ.ರಾ. ಗೋಪಾಲ (ಸಂ.) : EC 5 ತಿನ 97, ಉಕ್ಕಲ್ಗೆರೆ ; ಪುಟ 497, ಕ್ರಿ.ಶ. 1676.

19. ಡಾ. ಬಾ.ರಾ. ಗೋಪಾಲ (ಸಂ.) : EC 5 ತಿನ 199, ತಲಕಾಡು ; ಪುಟ 586, ಕ್ರಿ.ಶ. 1679.

20. ಡಾ. ಬಾ.ರಾ. ಗೋಪಾಲ (ಸಂ.) : EC 5 ತಿನ 01, ತಿನ ; ಪುಟ 324, ಕ್ರಿ.ಶ. 1725.

21. ಡಾ. ಬಾ.ರಾ. ಗೋಪಾಲ (ಸಂ.) : EC 5 ತಿನ 14, ತಿನ ; ಪುಟ 331, ಕ್ರಿ.ಶ. 18ನೇ ಶತಮಾನ.

22. ಡಾ. ಬಾ.ರಾ. ಗೋಪಾಲ (ಸಂ.) : EC 5 ತಿನ 16, ತಿನ ; ಪುಟ 343, ಕ್ರಿ.ಶ. 1749.

23. ಡಾ. ಬಾ.ರಾ. ಗೋಪಾಲ (ಸಂ.) : EC 5 ತಿನ 119, ಸೋಸಲೆ ; ಪುಟ 538, ಕ್ರಿ.ಶ. 1809.

24. ಡಾ. ಬಾ.ರಾ. ಗೋಪಾಲ (ಸಂ.) : EC 5 ತಿನ 4 ತಿನ ; ಪುಟ 325, ಕ್ರಿ.ಶ. 1855.

25. ಡಾ. ಬಾ.ರಾ. ಗೋಪಾಲ (ಸಂ.) : EC 5 ತಿನ 140, ವಿಜಯಪುರ ; ಪುಟ 549, ಕ್ರಿ.ಶ. 1855.

26. ಡಾ.ಬಾ.ರಾ.ಗೋಪಾಲ (ಸಂ.) : EC 5 ತಿನ 118, ಸೋಸಲೆ ;ಪುಟ 538,ಕ್ರಿ.ಶ.19ನೇ ಶತಮಾನ.

27. ಡಾ.ಬಾ.ರಾ.ಗೋಪಾಲ (ಸಂ.) :EC 5 ತಿನ 272, ಮೂಗೂರು;ಪುಟ.650,ಕ್ರಿ.ಶ.19ನೇ ಶತಮಾನ.